# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ

ದೂರವಾಣಿ ಸಂ.08354-230276
ಫ್ಯಾಕ್ಸ್ ನಂ.08354-230300
ಮೊ.ಸಂ.9480696389
ಮಿಂಚಂಚೆ: registrar@uhsbagalkot.in

ಕುಲಸಚಿವರ ಕಛೇರಿ,
ಉದ್ಯಾನಗಿರಿ,
ನವನಗರ,
ಬಾಗಲಕೋಟೆ-587104.

ಸಂಖ್ಯೆ:ಕುಸ/ತೋವಿವಿ/ಸೇವಿ/ಮುಂಬಡ್ತಿ/ 143 /2020-21 ದಿನಾಂಕ: 07.08.2020

**ವಿಷಯ** : 2019 ನೇ ಸಾಲಿನ ಸೇವಾ ಸಿಬ್ಬಂದಿಯವರ ಮುಂಬಡ್ತಿ ಕುರಿತು.

**ಉಲ್ಲೇಖ** :
1. ಕೃವಿವಿ, ಧಾರವಾಡ / ತೋವಿವಿ, ಬಾಗಲಕೋಟೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳು.
2. ದಿನಾಂಕ: 23.06.2020 ರಂದು ಜರುಗಿದ ಮುಂಬಡ್ತಿ ಪರಿಶೀಲನಾ ಸಮಿತಿ ಸಭೆಯ ನಡುವಳಿಗಳು.
3. ಈ ಕಛೇರಿ ಅಧಿಸೂಚನೆ ಸಂಖ್ಯೆ:ಕು/ತೋವಿವಿಬಾ/ಸೇ.ವಿ/ಸೇ.ಸಿ.ಮುಂಬಡ್ತಿ-2019/187/2020-21 ದಿನಾಂಕ: 26.06.2020 ರ ಪ್ರಕಾರ ಪ್ರಕಟಿತ ಶಿಕ್ಷಕೇತರ ಸಿಬ್ಬಂದಿಯವರ ಮುಂಬಡ್ತಿ ಅರ್ಹತಾ ಪಟ್ಟಿ
4. ದಿನಾಂಕ: 24.07.2020 ರಂದು ಜರುಗಿದ ಮೇಲ್ಮನವಿ ಪ್ರಾಧಿಕಾರ ಸಭೆಯ ಶಿಫಾರಸ್ಸುಗಳು.
5. ಮಾನ್ಯ ಕುಲಪತಿಗಳು, ತೋವಿವಿ, ಬಾಗಲಕೋಟೆ ಇವರ ಅನುಮೋದನೆ ದಿನಾಂಕ: 07.08.2020

**ಪೀಠಿಕೆ:**

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ 2019 ನೇ ಸಾಲಿನ ಶಿಕ್ಷಕೇತರ ಸಿಬ್ಬಂದಿಯವರ ಮುಂಬಡ್ತಿಗಾಗಿ ಅವರುಗಳ ಅರ್ಹತಾ ಪಟ್ಟಿಯನ್ನು ಸಲ್ಲಿಸಲು, ಶಿಕ್ಷಣ ನಿರ್ದೇಶಕರು ತೋ.ವಿ.ವಿ., ಬಾಗಲಕೋಟೆ ಇವರ ಅಧ್ಯಕ್ಷತೆಯಲ್ಲಿ ಹಾಗೂ ಸದಸ್ಯರುಗಳಾಗಿ ಸಂಶೋಧನಾ ನಿರ್ದೇಶಕರು, ವಿಸ್ತರಣಾ ನಿರ್ದೇಶಕರು, ಹಣಕಾಸು ನಿಯಂತ್ರಣಾಧಿಕಾರಿಗಳು, ಪ್ರಾಧ್ಯಾಪಕರು & ಮುಖ್ಯಸ್ಥರು, ಹಣ್ಣು ವಿಭಾಗ, ತೋ.ವಿ.ವಿ., ಬಾಗಲಕೋಟೆ ಇವರುಗಳನ್ನೊಳಗೊಂಡ 'ಮುಂಬಡ್ತಿ ಪರಿಶೀಲನಾ ಸಮಿತಿ'ಯನ್ನು ರಚಿಸಲಾಗಿತ್ತು.

ಸದರಿ ಮುಂಬಡ್ತಿ ಪರಿಶೀಲನಾ ಸಮಿತಿಯು ದಿನಾಂಕ: 23.06.2020 ರಂದು ಸಭೆ ಸೇರಿ ವಿವಿಧ ವೃಂದಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸೇವಾ ಸಿಬ್ಬಂದಿಯವರ ಮುಂಬಡ್ತಿಗಾಗಿ ಉಲ್ಲೇಖ (2) ರ ಪ್ರಕಾರ ಶಿಫಾರಸ್ಸು ಮಾಡಿದಂತೆ ಉಲ್ಲೇಖ (3) ರನ್ವಯ ಮುಂಬಡ್ತಿ ಅರ್ಹತಾ ಪಟ್ಟಿಯನ್ನು ತಯಾರಿಸಿ ಪ್ರಕಟಿಸಲಾಗಿರುತ್ತದೆ. ಸದರಿ ಅರ್ಹತಾ ಪಟ್ಟಿಗೆ ಸ್ವೀಕರಿಸಲಾದ ಮೇಲ್ಮನವಿಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಪರಿಶೀಲಿಸಿ, ತೋವಿವಿಯ ಮೇಲ್ಮನವಿ ಪ್ರಾಧಿಕಾರವು ಉಲ್ಲೇಖ (4)ರನ್ವಯ ಒಪ್ಪಿಗೆಯನ್ನು ನೀಡಿದ ಅನುಸಾರ ಮುಂಬಡ್ತಿ ಆದೇಶ ಹೊರಡಿಸಬೇಕಾಗಿರುತ್ತದೆ.

ಆದುದರಿಂದ, ಈ ಆದೇಶ.

Scanned by CamScanner

# ಆದೇಶ

ಮಾನ್ಯ ಕುಲಪತಿಗಳು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಇವರ ಆದೇಶದನ್ವಯ, ಅನುಬಂಧದಲ್ಲಿ ತೋರಿಸಿದಂತೆ ಸೇವಾ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಿ ಆದೇಶಿಸಲಾಗಿದೆ. ಸದರಿ ನೌಕರರು ತೋವಿವಿಯು ಕಾಲಕಾಲಕ್ಕೆ ಸಮಾನಾಂತರ ಹುದ್ದೆಗಳಿಗಾಗಿ ಪರಿಗಣಿಸಬಹುದಾದ ವೇತನ ಶ್ರೇಣಿ ಮತ್ತು ಇತರೆ ಭತ್ಯೆಗಳನ್ನು ಸಂಬಳದ ಜೊತೆಗೆ ಪಡೆಯಲು ಅರ್ಹರಿರುತ್ತಾರೆ. ಮುಂಬಡ್ತಿ ಹೊಂದಿದ ನೌಕರರು ದಿನಾಂಕ: 21.08.2020 ರೊಳಗಾಗಿ ಕೆಲಸಕ್ಕೆ ಹಾಜರಾಲು ಆದೇಶಿಸಲಾಗಿದೆ. ಒಂದು ವೇಳೆ ಸದರಿ ನೌಕರರು ನಿಗದಿತ ದಿನಾಂಕದೊಳಗಾಗಿ ಕೆಲಸಕ್ಕೆ ಹಾಜರಾಗದಿದ್ದಲ್ಲಿ, ಅವರಿಗೆ ಈ ಮುಂಬಡ್ತಿಯು ಇಷ್ಟವಿಲ್ಲವೆಂದು ಪರಿಗಣಿಸಿ, ತೋವಿವಿಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸೇವಾ ಹಿರಿತನ (ಜೇಷ್ಠತಾ) ಪಟ್ಟಿಯಲ್ಲಿ ಅವನ/ಅವಳ ಹೆಸರನ್ನು ಪ್ರಸಕ್ತ ಹುದ್ದೆಯ ಕೊನೆಯಲ್ಲಿ ಇರಿಸಲಾಗುವುದು ಹಾಗೂ ಪುನ: ಅವರುಗಳನ್ನು ಮುಂಬಡ್ತಿಗಾಗಿ ಪರಿಗಣಿಸುವುದಿಲ್ಲ. ಸಂಬಂಧಿಸಿದ ನೌಕರರು ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ನಿಯಂತ್ರಣಾಧಿಕಾರಿಗಳು ವಹಿಸಿದ ಕಛೇರಿಯ ಜವಾಬ್ದಾರಿಗಳನ್ನು ತಪ್ಪದೇ ನಿರ್ವಹಿಸುವುದು. ತಪ್ಪಿದಲ್ಲಿ, ನಿಯಂತ್ರಣಾಧಿಕಾರಿಗಳ ವರದಿಯ ಆಧಾರದ ಮೇಲೆ ಸಂಬಂಧಪಟ್ಟ ನೌಕರರ ವಿರುದ್ಧ ವಿಶ್ವವಿದ್ಯಾಲಯದಿಂದ ಸೂಕ್ತ ಕ್ರಮ ಜರುಗಿಸಲಾಗುವುದು.

ಆದೇಶದ ಮೇರೆಗೆ,

ಕುಲಸಚಿವರು.
ತೋ.ವಿ.ವಿ. ಬಾಗಲಕೋಟೆ

ಗೆ,
ಸಂಬಂಧಿಸಿದ ನೌಕರರುಗಳಿಗೆ,

**ಪ್ರತಿಯನ್ನು ಮಾಹಿತಿಗಾಗಿ:**

1. ವಿಶ್ವವಿದ್ಯಾಲಯದ ಎಲ್ಲ ಅಧಿಕಾರಿಗಳು,
2. ಎಲ್ಲ ಡೀನ್/ಸಹ ಸಂಶೋಧನಾ ಮತ್ತು ವಿಸ್ತರಣಾ ನಿರ್ದೇಶಕರು/ಮುಖ್ಯಸ್ಥರುಗಳು, ಸಂಶೋಧನಾ ಕೇಂದ್ರ, ಅಖಿಲ ಭಾರತ ಸಮನ್ವಯ ಸಂಶೋಧನಾ ಯೋಜನೆ, ವಿಸ್ತರಣಾ ಘಟಕಗಳು, ಕೃಷಿ ವಿಜ್ಞಾನ ಕೇಂದ್ರ,
3. ಮಾನ್ಯ ಕುಲಪತಿಗಳವರ ಆಪ್ತ ಕಾರ್ಯದರ್ಶಿಗಳು, ತೋ.ವಿ.ವಿ., ಬಾಗಲಕೋಟೆ ಇವರ ಮಾಹಿತಿಗಾಗಿ.

Scanned by CamScanner

ಅನುಬಂಧ

**ಆದೇಶ ಸಂಖ್ಯೆ:ಕುಸ/ತೋವಿವಿ/ನೇವಿ/ಮುಂಬಡ್ತಿ/ 143 /2020-21 ದಿನಾಂಕ: 07.08.2020**

**ಮಿಕ್ಕುಳಿದ ಮಾತೃ ವೃಂದದಡಿ ಮುಂಬಡ್ತಿ:**

1. **ಅಧೀಕ್ಷಕರು (ಸಾಮಾನ್ಯ) ಹುದ್ದೆಯಿಂದ ಸಹಾಯಕ ಆಡಳಿತಾಧಿಕಾರಿಗಳು ಹುದ್ದೆಗೆ ಮುಂಬಡ್ತಿ:**
**(Rs. 52650-1250-53900-1450-62600-1650-72500-1900-83900-2200-97100)**

| ಕ್ರ ಸಂ. | ಸಿಬ್ಬಂದಿಯ ಹೆಸರು, ಹುದ್ದೆ ಮತ್ತು ಕಾರ್ಯನಿರ್ವಹಿಸುತ್ತಿರುವ ಸ್ಥಳ | ಮುಂಬಡ್ತಿ ನೀಡಿದ ಹುದ್ದೆ ಮತ್ತು ನಿಯೋಜಿಸಿದ ಸ್ಥಳ (ಲೆಕ್ಕ ಶೀರ್ಷಿಕೆ ಸಂಖ್ಯೆ) | ಇವರಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು |
|---|---|---|---|
| 1 | **ಶ್ರೀಮತಿ ಸರೋಜಾ ತಳವಾರ** ,<br>ಅಧೀಕ್ಷಕರು (ಸಾಮಾನ್ಯ),<br>ಬಾಹ್ಯ ಪರೀಕ್ಷಾ ಕೇಂದ್ರ,<br>ತೋ.ವಿ.ವಿ., ಬಾಗಲಕೋಟೆ. | **ಸಹಾಯಕ ಆಡಳಿತಾಧಿಕಾರಿಗಳು,**<br>ತೋಮವಿ, ಬಾಗಲಕೋಟೆ<br>(ಎ.ಬಿ.ಎ.ಸಿ. ಸಂಖ್ಯೆ: 2003) | ಡೀನ್,<br>ತೋ.ಮ.ವಿ., ಬಾಗಲಕೋಟೆ |

2. **ಶೀಘ್ರಲಿಪಿಗಾರ ಹುದ್ದೆಯಿಂದ ಆಪ್ತ ಕಾರ್ಯದರ್ಶಿ ಹುದ್ದೆಗೆ ಮುಂಬಡ್ತಿ:**
**(Rs.43100-1100-46400-1250-53900-1450-62600-1650-72500-1900-83900)**

| ಕ್ರ ಸಂ. | ಸಿಬ್ಬಂದಿಯ ಹೆಸರು, ಹುದ್ದೆ ಮತ್ತು ಕಾರ್ಯನಿರ್ವಹಿಸುತ್ತಿರುವ ಸ್ಥಳ | ಮುಂಬಡ್ತಿ ನೀಡಿದ ಹುದ್ದೆ ಮತ್ತು ನಿಯೋಜಿಸಿದ ಸ್ಥಳ (ಲೆಕ್ಕ ಶೀರ್ಷಿಕೆ ಸಂಖ್ಯೆ) | ಇವರಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು |
|---|---|---|---|
| 1* | **ಶ್ರೀ ವಿದ್ಯಾಧರ ವಿಠ್ಠಲರಾವ್,**<br>ಶೀಘ್ರಲಿಪಿಗಾರರು,<br>ಪ್ರಾದೇಶಿಕ ಕಛೇರಿ, ಜಿಕೆವಿಕೆ,<br>ತೋವಿವಿ., ಆವರಣ, ಬೆಂಗಳೂರು. | **ಆಪ್ತ ಕಾರ್ಯದರ್ಶಿಗಳು,**<br>ಡೀನ್ ಸ್ನಾತಕೋತ್ತರ ಕಛೇರಿ,<br>ತೋ.ವಿ.ವಿ., ಬಾಗಲಕೋಟೆ<br>(ಎ.ಬಿ.ಎ.ಸಿ. ಸಂಖ್ಯೆ: 1001) | ಡೀನ್ ಸ್ನಾತಕೋತ್ತರ,<br>ತೋ.ವಿ.ವಿ., ಬಾಗಲಕೋಟೆ |

3. **ವೇತನ ಶ್ರೇಣಿ ರೂ. 21400-42000 ಹೊಂದಿರುವ ನೌಕರರಿಗೆ ಕ್ಷೇತ್ರ ಸಹಾಯಕ ಹುದ್ದೆಗೆ ಮುಂಬಡ್ತಿ**
**(Rs. 30350-750-32600-850-36000-950-39800-1100-46400-1250-53900-1450-58250)**

| ಕ್ರ ಸಂ. | ಸಿಬ್ಬಂದಿಯ ಹೆಸರು, ಹುದ್ದೆ ಮತ್ತು ಕಾರ್ಯನಿರ್ವಹಿಸುತ್ತಿರುವ ಸ್ಥಳ | ಮುಂಬಡ್ತಿ ನೀಡಿದ ಹುದ್ದೆ ಮತ್ತು ನಿಯೋಜಿಸಿದ ಸ್ಥಳ (ಲೆಕ್ಕ ಶೀರ್ಷಿಕೆ ಸಂಖ್ಯೆ) | ಇವರಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು |
|---|---|---|---|
| 1* | **ಶ್ರೀ ಎಸ್. ಜಿ. ಕುರಬೇಟ್,**<br>ಹಿರಿಯ ಕಾವಲುಗಾರ,<br>ಪ್ರಾತೋಸಂವಿಕೆ, ಕುಂಭಾಪೂರ. | **ಕ್ಷೇತ್ರ ಸಹಾಯಕ,**<br>ತೋಮವಿ, ಕೋಲಾರ<br>(ಎ.ಬಿ.ಎ.ಸಿ. ಸಂಖ್ಯೆ: 2002) | ಡೀನ್,<br>ತೋ.ಮ.ವಿ., ಕೋಲಾರ |

* ಸದರಿ ನೌಕರರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ಅವಕಾಶಗಳಡಿಯಲ್ಲಿ ಅನ್ವಯಿಕ ಪ್ರಯಾಣ ಭತ್ಯೆ ಮತ್ತು ಸೇರಿಕೆ ಕಾಲವನ್ನು ಪಡೆಯಲು ಅರ್ಹರಿರುತ್ತಾರೆ.

ಆದೇಶದ ಮೇರೆಗೆ,

**ಕುಲಸಚಿವರು.**
**ತೋ.ವಿ.ವಿ. ಬಾಗಲಕೋಟೆ**

Scanned by CamScanner